# ರಿಯಾಲಿಟಿ ರಗಳೆ!

**‘ಟೀವಿ ರಿಯಾಲಿಟಿ ಷೋಗಳಿಂದ ಕನ್ನಡ ಸಿನಿಮಾಗಳಿಗೆ ಹೊಡೆತ ಬಿದ್ದಿದೆ’ ಎನ್ನುತ್ತಿದ್ದಾರೆ ನಿರ್ಮಾಪಕರು. ‘ಉದ್ಯಮ ಚೆನ್ನಾಗಿದೆ. ರಿಯಾಲಿಟಿ ಷೋ ಸುದ್ದಿಗೆ ಬರಬೇಡಿ’ ಎನ್ನುತ್ತಿದ್ದಾರೆ ಹೀರೋಗಳು. ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ವಿನಂತಿ, ಧರಣಿ, ಹೋರಾಟದ ಮಾತುಗಳು ಭುಗಿಲೆದ್ದಿವೆ. ನಿಜಕ್ಕೂ ‘ರಿಯಾಲಿಟಿ’ ಏನು?**

★ **ಬಿ.ಎಂ. ಹನೀಫ್**

ಟೀವಿ ಮತ್ತು ಸಿನಿಮಾದ ನಡುವಣ ‘ಕೋಳಿಜಗಳ’ ಮತ್ತೆ ಭುಗಿಲೆದ್ದಿದೆ. ಈ ಸಲವೂ ರಿಯಾಲಿಟಿ ಷೋ ಗಳ ನೆಪದಲ್ಲಿ. ‘ಟೀವಿ ರಿಯಾಲಿಟಿ ಷೋ ಗಳಲ್ಲಿ ಕನ್ನಡ ಚಿತ್ರರಂಗದ ಪ್ರಮುಖ ತಾರೆಯರು ಭಾಗವಹಿಸುವುದನ್ನು ನಿಲ್ಲಿಸಬೇಕು’ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಆಗ್ರಹಿಸಿದೆ. ‘ಟೀವಿ ರಿಯಾಲಿಟಿ ಷೋಗಳಲ್ಲಿ ಕನ್ನಡದ ಪ್ರಮುಖ ಹೀರೋ– ಹೀರೋಯಿನ್‌ಗಳು ಪಾಲ್ಗೊಳ್ಳುವುದರಿಂದಾಗಿ ರಾತ್ರಿಯ ಸಿನಿಮಾ ಪ್ರದರ್ಶನಗಳಿಗೆ ಜನರು ಬರುವುದು ಕಡಿಮೆಯಾಗಿದೆ. ಥಿಯೇಟರ್‌ಗಳು ಖಾಲಿ ಹೊಡೆಯುತ್ತಿವೆ. ಉದ್ಯಮ ಸಂಕಷ್ಟದಲ್ಲಿದೆ. ಹಾಗಾಗಿ ರಿಯಾಲಿಟಿ ಷೋ ಗಳಲ್ಲಿ ಹೀರೋ– ಹೀರೋಯಿನ್‌ಗಳು ಭಾಗವಹಿಸಬಾರದು. ಕನ್ನಡ ಸಿನಿಮಾ ರಂಗ ಉಳಿಯಬೇಕಾದರೆ ಇದು ಅತೀ ಅಗತ್ಯವಾಗಿ ಆಗಬೇಕಾದ ಕೆಲಸ’ ಎನ್ನುವುದು ಚಲನಚಿತ್ರ ನಿರ್ಮಾಪಕರ ನಿಲುವು. ಚಲನಚಿತ್ರ ವಾಣಿಜ್ಯ ಮಂಡಳಿಯು ನಿರ್ಮಾಪಕರ ಈ ನಿಲುವನ್ನು ಬೆಂಬಲಿಸಿದೆ. ಅದಕ್ಕಾಗಿ ಟೀವಿ ರಿಯಾಲಿಟಿ ಷೋಗಳ ಶೂಟಿಂಗ್ ನಡೆಯುವ ಸ್ಟುಡಿಯೋಗಳ ಮುಂದೆ ಒಂದು ದಿನದ ಧರಣಿಯನ್ನೂ ನಡೆಸಿದೆ. ಈ ಧರಣಿಯಲ್ಲಿ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸಾ.ರಾ.ಗೋವಿಂದು ನೇತೃತ್ವದಲ್ಲಿ ಪದಾಧಿಕಾರಿಗಳು ಮತ್ತು ಹಲವು ನಿರ್ಮಾಪಕರು ಭಾಗವಹಿಸಿದ್ದಾರೆ. ‘ಹೀರೋಗಳು ರಿಯಾಲಿಟಿ ಷೋಗಳಿಂದ ಹಿಂದೆ ಸರಿಯದಿದ್ದರೆ ಮುಂದೆ ಉಗ್ರಹೋರಾಟ ನಡೆಸಲಾಗುವುದು’ ಎಂಬ ಮಾತೂ ನಿರ್ಮಾಪಕರ ವಲಯದಿಂದ ಕೇಳಿಬಂದಿದೆ.

ಸಿನಿಮಾಗಳಂತೆ ಟೀವಿಯೂ ಒಂದು ಪ್ರತ್ಯೇಕ ಉದ್ಯಮವಾಗಿ ಬೆಳೆದುನಿಂತಿದೆ. ಯಾವ ಸಿನಿಮಾ ನೋಡಬೇಕು ಎನ್ನುವುದನ್ನೂ ಕೆಲವು ಸಂದರ್ಭಗಳಲ್ಲಿ ಟೀವಿ ಮೂಲಕವೇ ನಿರ್ಧರಿಸುವ ಪ್ರೇಕ್ಷಕ ವರ್ಗವೂ ಹುಟ್ಟಿಕೊಂಡಿದೆ. ಹಾಗಿರುವಾಗ ಚಿತ್ರ ನಿರ್ಮಾಪಕರು ಟೀವಿ ಯನ್ನು ನಿಯಂತ್ರಿಸಲು ಹೊರಡುವುದು ಎಷ್ಟು ಸರಿ?

ಈ ಹಿನ್ನೆಲೆಯಲ್ಲೇ ಟೀವಿ ರಿಯಾಲಿಟಿ ಷೋಗಳಲ್ಲಿ ಭಾಗವಹಿಸುತ್ತಿರುವ ಯಾವ ಪ್ರಮುಖ ನಟ– ನಟಿಯರೂ ವಾಣಿಜ್ಯ ಮಂಡಳಿಯ ಈ ವಿನಂತಿಯನ್ನು ‘ಗಂಭೀರವಾಗಿ’ ಪರಿಗಣಿಸಿಲ್ಲ. ಗಂಭೀರ ಪ್ರತಿಕ್ರಿಯೆಗೆ ಅರ್ಹವಾದ ವಿನಂತಿ ಇದೆಂದು ಅವರಿಗೆ ಅನ್ನಿಸಿಯೂ ಇಲ್ಲ! ಪತ್ರಕರ್ತರಿಗೆ ಬೇರೆ ಸಮಾರಂಭಗಳಲ್ಲಿ ಸಿಕ್ಕಿದ ಕೆಲವು ನಟರು ಮಾತ್ರ ಈ ಬಗ್ಗೆ ಪ್ರಶ್ನೆ ಕೇಳಿದಾಗ ಉತ್ತರಿಸಿದ್ದಾರೆ. ಪ್ರಮುಖವಾಗಿ ನಟ ಪುನೀತ್ ರಾಜ್‌ಕುಮಾರ್, ‘ನಾನೂ ಟೀವಿ ರಿಯಾಲಿಟಿ ಷೋ ಮತ್ತು ಸಿನಿಮಾಗಳಲ್ಲಿ ನಟಿಸಿದ್ದೇನೆ. ಸಿನಿಮಾ ತಾರೆಯರು ಟೀವಿ ರಿಯಾಲಿಟಿ ಷೋಗಳಲ್ಲಿ ಭಾಗವಹಿಸುವುದು ತಪ್ಪೆಂದು ನನಗೆ ಅನ್ನಿಸುತ್ತಿಲ್ಲ’ ಎಂದಿರುವುದು ಪತ್ರಿಕೆಗಳಲ್ಲಿ ಸುದ್ದಿಯಾಗಿದೆ. ಹಾಗೆಯೇ ಜನಪ್ರಿಯ ರಿಯಾಲಿಟಿ ಷೋ ‘ಡ್ರಾಮಾ ಜೂನಿಯರ್ಸ್’ ನಲ್ಲಿ ತೀರ್ಪುಗಾರರಾಗಿ ಭಾಗವಹಿಸಿದ ನಟ ವಿಜಯ ರಾಘವೇಂದ್ರ. ‘ಹೀಗೆ ಯಾರಿಗೂ ನಿರ್ಬಂಧ ಹೇರುವುದು ಸರಿಯಲ್ಲ. ಸಿನಿಮಾಗಳಿದ್ದಾಗ ಅಲ್ಲಿಯೂ ಕೆಲಸ ಮಾಡುತ್ತೇವೆ. ಟೀವಿ ಯಲ್ಲಿ ಅವಕಾಶ ಸಿಕ್ಕಿದಾಗ ಅಲ್ಲಿಯೂ ಭಾಗವಹಿಸುತ್ತೇವೆ’ ಎಂದಿದ್ದಾರೆ. ಉಳಿದ ಸ್ಟಾರ್‌ಗಳು ತಣ್ಣಗೆ ತಮ್ಮ ಕೆಲಸಗಳಲ್ಲಿ ಮುಳುಗಿದ್ದಾರೆ. ರಿಯಾಲಿಟಿ ಷೋಗಳ ಜೈತ್ರಯಾತ್ರೆ ಮುಂದುವರಿದಿದೆ.

ಸಿನಿಮಾ ಥಿಯೇಟರುಗಳು ಖಾಲಿ ಹೊಡೆಯುತ್ತಿವೆ ಎನ್ನುವುದು ನಿಜ. ಆದರೆ ಅದಕ್ಕೆ ಟೀವಿ ರಿಯಾಲಿಟಿ ಷೋಗಳೇ ನೇರ ಕಾರಣವೆ? ಇದು ಚರ್ಚೆಗೆ ಅರ್ಹವಾಗಿರುವ ವಿಷಯ. ಇತ್ತೀಚಿನ ದಿನಗಳಲ್ಲಿ ಟೀವಿ ಯತ್ತ ಭಾರೀ ಸಂಖ್ಯೆಯ ಪ್ರೇಕ್ಷಕರನ್ನು ಸೆಳೆದಿಟ್ಟಿರುವುದು ಈ ರಿಯಾಲಿಟಿ ಷೋಗಳು ಎನ್ನುವುದರಲ್ಲಿ ಎರಡು ಮಾತಿಲ್ಲ. ಬಿಗ್‌ಬಾಸ್, ಮಜಾ ಟಾಕೀಸ್, ಡ್ರಾಮಾ ಜೂನಿಯರ್ಸ್, ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್, ಕಿಕ್, ಸರೆಗಮಪ ಲಿಟ್ಲ್ ಚಾಂಪಿಯನ್ಸ್, ಕಾಮಿಡಿ ಕಿಲಾಡಿಗಳು, ವೀಕೆಂಡ್ ವಿದ್ ರಮೇಶ್, ಸೂಪರ್ ಮಿನಿಟ್ ... ಒಂದೇ ಎರಡೇ? ಬಹುತೇಕ ಎಲ್ಲ ಮನರಂಜನಾ ಚಾನೆಲ್‌ಗಳೂ ತಮ್ಮದೇ ಆದ ರಿಯಾಲಿಟಿ ಷೋಗಳನ್ನು ಪ್ರಸಾರ ಮಾಡುತ್ತಿವೆ. ಕನ್ನಡ ಚಿತ್ರರಂಗದ ಅನೇಕ ಸೂಪರ್ ಹೀರೋಗಳು ಕಿರುತೆರೆಯ ಈ ರಿಯಾಲಿಟಿ ಷೋಗಳಲ್ಲಿ ವಿಜೃಂಭಿಸುತ್ತಿದ್ದಾರೆ. ಶಿವರಾಜ್ ಕುಮಾರ್, ರವಿಚಂದ್ರನ್, ಸುದೀಪ್, ಗಣೇಶ್, ರಮೇಶ್ ಅರವಿಂದ್, ವಿಜಯ ರಾಘವೇಂದ್ರ, ರಚಿತಾ ರಾಮ್, ಪ್ರಿಯಾಮಣಿ, ಮಾಲಾಶ್ರೀ, ಶ್ರುತಿ ಹರಿಹರನ್– ಹೀಗೆ ಇವುಗಳಲ್ಲಿ ಭಾಗವಹಿಸುವ ತಾರೆಯರ ಪಟ್ಟಿ ಇನ್ನೂ ಉದ್ದವಿದೆ. ಮನೆಯಲ್ಲೇ ಕುಳಿತು ಟೀವಿಯಲ್ಲಿ ಮಹಾತಾರೆಯರನ್ನು ನೋಡುವ ಅವಕಾಶ ಇರುವಾಗ, ಜತೆಗೆ ‘ರಿಯಾಲಿಟಿ’ಯ ಥ್ರಿಲ್ ಸಿಗುವಾಗ ಥಿಯೇಟರಿಗೆ ಹೋಗಿ ನೂರಾರು ರೂಪಾಯಿ ಖರ್ಚು ಮಾಡಿ ಯಾರಾದರೂ ಏಕೆ ಸಿನಿಮಾ ನೋಡುತ್ತಾರೆ?

ವಾಣಿಜ್ಯ ಮಂಡಳಿಯ ಅಧ್ಯಕ್ಷ ಸಾ.ರಾ.ಗೋವಿಂದು ಈ ಸಮಸ್ಯೆಯನ್ನು ವಿವರಿಸುವುದು ಹೀಗೆ: ‘ರಾಜ್ಯದಲ್ಲಿ ಕನ್ನಡ ಸಿನಿಮಾಗಳನ್ನು ನೋಡುವವರ ಸಂಖ್ಯೆ ಕುಸಿತಾ ಇದೆ. ಒಟ್ಟು 1200ಕ್ಕೂ ಹೆಚ್ಚು ಥಿಯೇಟರ್‌ಗಳು ಇದ್ದದ್ದು